**ಸಾಕ್ಷಿಯನ್ನು ದಿನಾಂಕ:11.07.2025 ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃಆರೋಪಿ ಪರ ಶ್ರೀ. ಎಂ ವಿ ವಕೀಲರಿಂದಃ**

ಶೋಭಾ ಎನ್ನುವವರು ನನ್ನ ದೊಡ್ಡಪ್ಪನ ಮಗಳಾಗಿದ್ದು, ಅವರು ಜೀವಂತ ಇದ್ದಾರೆ. ಶೋಭಾ ರವರು ಹೂಡಿದ್ದ ದಾವೇ ಏನಾಯಿತು ಎಂದು ನನಗೆ ಗೊತ್ತಿಲ್ಲ. ನಾನು ಅಶೋಕ್ ರವರ ಮನೆಯಲ್ಲಿ ಬಾಡಿಗೆಗೆ ಇದ್ದೇನೆ ಎಂದರೆ ಸರಿಯಲ್ಲ. ಅಶೋಕ್ ರವರು ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ.

2. ನಾನು ಮತ್ತಿಕೆರೆ ರಸ್ತೆ, 9ನೇ ಮುಖ್ಯ ರಸ್ತೆ, ಯಶವಂತಪುರದಲ್ಲಿ ವಾಸವಿದ್ದೇನೆ. ನಾನು ವಾಸವಿರುವ ಮನೆಯ ನಂಬರ್ ನನಗೆ ಗೊತ್ತಿಲ್ಲ. ನಾನು ಅಶೋಕ್ ರವರ ಮನೆಯಲ್ಲಿ ವಾಸವಿದ್ದರೂ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಶೋಕ್ ರವರು ನನಗೆ 5-6 ವರ್ಷಗಳಿಂದ ಪರಿಚಯಸ್ಥರು. ಸದರಿ ಅಶೋಕ್ ರವರು ಮಾನ್ಯ ಉಚ್ಛ ನ್ಯಾಯಾಲಯದ ವಾಹನದ ಕಾರು ಚಾಲಕರಾಗಿದ್ದಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸರ್ವೆ ನಂ.171ನ್ನು ಅಶೋಕ್ ರವರು ಮುಂದೆ ನಿಂತು ಆರೋಪಿಗೆ ನಮ್ಮ ಕುಟುಂಬದಿಂದ ಸದರಿ ಆಸ್ತಿಯನ್ನು ಮಾರಾಟ ಮಾಡಿಸಿರುತ್ತಾರೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ.

3. ದಿನಾಂಕಃ01.09.2023 ರಂದು ಆರೋಪಿಗೆ ಆದ ಕ್ರಯ ಪತ್ರದಲ್ಲಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ಸದರಿ ಕ್ರಯ ಪತ್ರದ ಗಣಕೀಕೃತ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಡಿ.1 ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿ ನನ್ನ ಭಾವಚಿತ್ರ ಕೂಡ ಇರುತ್ತದೆ. ಸದರಿ ದಾಖಲೆಗೆ ನನ್ನ ತಾಯಿ ಸಹಿ ಮಾಡಲು ಹೇಳಿದ ಕಾರಣ, ಅದರ ವಿಚಾರ ನನಗೆ ಗೊತ್ತಿಲ್ಲ.

4. ಈ ಪ್ರಕರಣದಲ್ಲಿ ನಾನು ನೇಮಿಸಿಕೊಂಡ ವಕೀಲರ ಹೆಸರು ದೇವಾನಂದ್. ಅಸಲು ದಾವೇ ಸಂ.272/2019ನ್ನು ಹಿಂಪಡೆಯಲಾಗಿದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸದರಿ ದಾವೇಯಲ್ಲಿ ಶೋಭಾ ರವರಿಗೆ ನೀಡಿದ್ದ ಈ ಪ್ರಕರಣದಲ್ಲಿ ನಿಶಾನೆಯಾಗಿರುವ ನಿಪಿ.1,3 ಮತ್ತು 5 ರ ಚೆಕ್ಕುಗಳನ್ನು ದುಬರ್ಳಕೆ ಮಾಡಿಕೊಂಡು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ

ಸರಿಯಲ್ಲ. ಸದರಿ ದಾವೇ ವಜಾ ಆದ ಮೂರು ದಿನಗಳ ನಂತರ ನಿಡಿ.1ರ ಕ್ರಯಪತ್ರ ಆಗಿರುತ್ತದೆ ಎಂದರೆ ಸಾಕ್ಷಿಯು ತನೆಗ ಗೊತ್ತಿಲ್ಲವೆಂದು ನುಡಿಯುತ್ತಾರೆ.

5. ನಿಪಿ.1,3 ಮತ್ತು 5ರಲ್ಲಿ ಹೆಸರು ಮತ್ತು ದಿನಾಂಕ ಒಂದು ಬಣ್ಣದ ಶಾಹಿಯಲ್ಲಿದ್ದು, ಉಳಿಕೆ ಅಂಶಗಳು ಬೇರೆ ಶಾಹಿಯಲ್ಲಿವೆ ಎಂದರೆ ಸರಿ. ನಿಪಿ.1,3 ಮತ್ತು 5ನ್ನು ಆರೋಪಿಯೇ ಭರ್ತಿ ಮಾಡಿ ನೀಡಿದ್ದರು. ನಿಪಿ.1,3 ಮತ್ತು 5 ಚೆಕ್ಕುಗಳನ್ನು ಶೋಭಾ ರವರಿಗೆ ನೀಡಲಾಗಿತ್ತು ಎಂದರೆ ಸರಿಯಲ್ಲ. ನಿಡಿ.1 ಆದ ನಂತರ ಆರೋಪಿಯ ಹೆಸರಿಗೆ ಖಾತೆಯಾಗಲು ಬಾಕಿ ಇದ್ದಾಗ, ವಸಂತಮ್ಮ ಅಸಲು ದಾವೇ ನಂ.706/2023 ದಾವೇ ಹೂಡಿದ್ದರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸದರಿ ದಾವೇಯಲ್ಲಿ ನಾನು 24ನೇ ಪ್ರತಿವಾದಿ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಶೋಭಾರವರಿಗೆ ಕೊಡಬೇಕಾಗಿದ್ದ ಹಣವನ್ನು ವಸಂತಮ್ಮ ರವರು ದಾವೇ ಹೂಡಿದ್ದ ಕಾರಣ, ಆರೋಪಿ ತಡೆಹಿಡಿದಿರುತ್ತಾರೆಯೇ ವಿನಃ ನನಗೂ ಆರೋಪಿಗೂ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಹಣ ನೀಡುವಷ್ಟು ಚೈತನ್ಯ ನನಗೆ ಇಲ್ಲ ಎಂದರೆ ಸರಿಯಲ್ಲ. ಶೋಭಾ ರವರಿಗೆ ನ್ಯಾಯಾಲಯದ ಬಗ್ಗೆ ಹೆಚ್ಚು ಜ್ಞಾನ ಇಲ್ಲದ ಕಾರಣ, ಅವರ ಚೆಕ್ಕುಗಳನ್ನು ಪಡೆದು ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

6. ನಾನು ಇಂದು ನನ್ನ ಮೂಲ ಪಡಿತರ ಚೀಟಿಯನ್ನು ತಂದಿಲ್ಲ. ಸದರಿ ಪಡಿತರ ಚೀಟಿಯ ನಕಲು ನನ್ನ ಬಳಿ ಇರುತ್ತದೆ. ನನ್ನ ಬಳಿ ಬಿಪಿಎಲ್ ಕಾರ್ಡ್ ಇರುತ್ತದೆ. ನಾನು ಯಶವಂತಪುರದಲ್ಲಿ ವಾಸವಿರುವ ವಿಳಾಸದ ಪುರಾವೆ ನನ್ನ ಬಳಿ ಇದೆ. ಸದರಿ ಪುರಾವೆಯನ್ನು ನಾನು ನ್ಯಾಯಾಲಯಕ್ಕೆ ಮುಂದಿನ ದಿನಾಂಕದಂದು ಹಾಜರುಪಡಿಸಬಲ್ಲೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

**( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್